# ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ತುಮಕೂರು ಜಿಲ್ಲೆ,

ನೆಲಮಹಡಿ, ಹೊಸ ನ್ಯಾಯಾಲಯಗಳ ಸಂಕೀರ್ಣ, ತುಮಕೂರು.

ದೂರವಾಣಿ ಸಂಖ್ಯೆ 0816 - 2255133 E mail - dlsatumkur1@gmail.com


ಸಂಖ್ಯೆ:ಡಿಎಲ್ಎಸ್ಎ/ಎಲ್ಎಡಿಸಿ/ಸಿ.ನೇಮಕಾತಿ/01/2023 1243/23 ದಿನಾಂಕ 23/11/2023

**:: ಅಧಿಸೂಚನೆ ::**

ವಿಷಯ: ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಾನೂನು ನೆರವು ಅಭಿರಕ್ಷಕರ ಕಛೇರಿ ತುಮಕೂರು ರಲ್ಲಿ ಮಾನವ ಸಂಪನ್ಮೂಲ ವ್ಯಕ್ತಿ ನೇಮಕಾತಿ ಕುರಿತು.

******

ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ Legal Aid Defence Council Modified Scheme 2022 ಮತ್ತು ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರ ಬೆಂಗಳೂರು ರವರ ಪತ್ರ ಸಂಖ್ಯೆ.KSLSA: 31/LADCS-Human Resources/2023 , ದಿನಾಂಕ -17/11/2023 ರ ಅನುಸಾರ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಾನೂನು ನೆರವು ಅಭಿರಕ್ಷಕರ ಕಛೇರಿ ತುಮಕೂರುರಲ್ಲಿ ಖಾಲಿಯಿರುವ ಈ ಕೆಳಕಂಡ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಉದ್ದೇಶಿಸಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರಮ ಸಂಖ್ಯೆ | ಹುದ್ದೆ | ಹುದ್ದೆಗಳ ಸಂಖ್ಯೆ |
|---|---|---|
| 01 | ಕಛೇರಿ ಸಹಾಯಕ/ ಗುಮಾಸ್ತ | 01 |
| 02 | ಜವಾನ (ಮುನ್ಸಿ /ಅಟೆಂಡೆಂಟ್ ) | 01 |

A) **ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಾನೂನು ನೆರವು ಅಭಿರಕ್ಷಕರ ಕಛೇರಿ ತುಮಕೂರು ರಲ್ಲಿ ಮಾನವ ಸಂಪನ್ಮೂಲ ವ್ಯಕ್ತಿ ರವರ ನೇಮಕಾತಿ ಪ್ರಕ್ರಿಯೆ ಈ ಕೆಳಗಿನಂತಿರುತ್ತದೆ.**

**1. ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ: 23.11.2023 ರಿಂದ 08.12.2023 ಸಂಜೆ 5.00 ಘಂಟೆ** ತನಕ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ **0816 – 2255133** ಮತ್ತು ಇ ಮೇಲ್ ಪತ್ರ ವ್ಯವಹಾರಕ್ಕಾಗಿ E mail – dlsatumkur1@gmail.com ಗೆ ಸಂಪರ್ಕಿಸಬಹುದು.

ಅರ್ಜಿ ಸಲ್ಲಿಸಬೇಕಾದ ವಿಳಾಸ:

ಸದಸ್ಯ ಕಾರ್ಯದರ್ಶಿಗಳು,<br>
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ<br>
ಕಾನೂನು ನೆರವು ಅಭಿರಕ್ಷಕರ ಕಛೇರಿಗೆ ಮಾನವ ಸಂಪನ್ಮೂಲ ವ್ಯಕ್ತಿ<br>
ನೇಮಕಾತಿ ಸಮಿತಿ, ನೆಲ ಮಹಡಿ , ಹೊಸ ನ್ಯಾಯಾಲಯಗಳ ಸಂಕೀರ್ಣ,<br>
ತುಮಕೂರು.

**2. ಅರ್ಜಿಯ ನಮೂನೆ** ಯನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ , ನೆಲಮಹಡಿ , ಹೊಸ ನ್ಯಾಯಾಲಯಗಳ ಸಂಕೀರ್ಣ, ತುಮಕೂರು ನಲ್ಲಿ ಖುದ್ದಾಗಿ (ರಜೆ ದಿನಗಳನ್ನು ಹೊರತುಪಡಿಸಿ)ಅಥವಾ ತುಮಕೂರು ಜಿಲ್ಲಾ ನ್ಯಾಯಾಲಯದ ವೆಬ್‌ಸೈಟ್ ರ ಮೂಲಕ **ಬೆಳಗ್ಗೆ 10.30 ರಿಂದ ಸಂಜೆ 5.00 ಘಂಟೆ** ಸಮಯದಲ್ಲಿ ಪಡೆದುಕೊಳ್ಳಬಹುದಾಗಿದೆ.

**3.ಮಾನವ ಸಂಪನ್ಮೂಲ ವ್ಯಕ್ತಿ ರವರ ನೇಮಕಾತಿಗೆ ಶೈಕ್ಷಣಿಕ ಅರ್ಹತೆ/ವೇತನ ಈ ಕೆಳಗಿನಂತೆ ಇರುತ್ತದೆ.**

| ಕ್ರ.ಸಂ | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | ಕನಿಷ್ಟ ವಿದ್ಯಾರ್ಹತೆ | ವೇತನ (ರೂ.) |
|---|---|---|---|---|

| | | | | |
|---|---|---|---|---|
| 01 | ಕಛೇರಿ ಸಹಾಯಕ/ ಗುಮಾಸ್ತ | 01 | * ಯಾವುದೇ ಪದವಿ<br>*ಮೂಲಪದ ಸಂಸ್ಕರಣ ಕೌಶಲ್ಯಗಳು ಮತ್ತು ಕಾರ್ಯನಿರ್ವಹಿಸುವ ಸಾಮಾರ್ಥ್ಯ,ಕಂಪ್ಯೂಟರ್ ಮತ್ತು ಡೇಟಾವನ್ನು ಫೀಡ್ ಮಾಡುವ ಕೌಶಲ್ಯಗಳು<br>* ಅರ್ಜಿಯ ಸರಿಯಾದ ಸೆಟ್ಟಿಂಗ್ ನೊಂದಿಗೆ ಉತ್ತಮ ಟೈಪಿಂಗ್ ವೇಗ,<br>*ಡಿಕ್ಟೇಷನ್ ತೆಗೆದುಕೊಳ್ಳುವ ಮತ್ತು ನ್ಯಾಯಾಲಯಗಳಲ್ಲಿ ಪ್ರಸ್ತುತಿಗಾಗಿ ಪೈಲುಗಳನ್ನು ಸಿದ್ದಪಡಿಸುವ ಸಾಮಾರ್ಥ್ಯ,<br>* ಪೈಲು ನಿರ್ವಹಣೆ ಪ್ರಕ್ರಿಯೆ ಜ್ಞಾನ. | 19,000/-<br>(ಕಾನೂನು ನೆರವು ಅಭಿರಕ್ಷಕರ ಪರಿಷ್ಕೃತ ಯೋಜನೆ 2022 ರ ಅನುಸಾರ) |
| 02 | ಜವಾನ (ಮುನ್ಸಿ /ಅಟೆಂಡೆಂಟ್ ) | 01 | * ಎಸ್ ಎಸ್ ಎಲ್ ಸಿ ಉತ್ತೀರ್ಣ | 15,202/-<br>(ಕರ್ನಾಟಕ ಸರ್ಕಾರ ದ ಕಾರ್ಮಿಕ ಇಲಾಖೆ ನಿಗಧಿಪಡಿಸಿದ ಕನಿಷ್ಟ ವೇತನದ ಪ್ರಕಾರ) |

**4.ಮಾನವ ಸಂಪನ್ಮೂಲ ವ್ಯಕ್ತಿ ರವರ ಕಾರ್ಯವಿಧಾನಗಳು ಈ ಕೆಳಗಿನಂತೆ ಇರುತ್ತದೆ.**

| ಕ್ರಮ ಸಂಖ್ಯೆ | ಹುದ್ದೆ | ಹುದ್ದೆಗೆ ನಿಗಧಿಪಡಿಸಿದ ಕಾರ್ಯವಿಧಾನಗಳು |
|---|---|---|
| 01 | ಕಛೇರಿ ಸಹಾಯಕ/ ಗುಮಾಸ್ತ | * ಕಾನೂನು ನೆರವಿನ ಪ್ರಕರಣಗಳ ನವೀಕೃತ ದಾಖಲೆಯನ್ನು ಇಟ್ಟುಕೊಳ್ಳುವುದು<br>* ಕಾನೂನು ನೆರವು ಪ್ರಕರಣಗಳ ಕಡತಗಳನ್ನು ನವೀಕರಿಸಿಡುವುದು ಮತ್ತು NALSA ಪೋರ್ಟಲ್ ಮತ್ತು ಡಿಜಿಟಲ್ ಪ್ಲಾಟ್ ಫಾರಂ ನಲ್ಲಿ ಅಪ್ ಡೇಟ್ ಮಾಡುವುದು.<br>* ಕಾನೂನು ನೆರವು ಪ್ರಕರಣಗಳ ಸಂಪೂರ್ಣ ಕಡತಗಳನ್ನು ನಿರ್ವಹಿಸುವುದು ಮತ್ತು ವ್ಯವಸ್ಥಿತ ನಮೂನೆಯಲ್ಲಿ ಜೋಡಿಸಿಡುವುದು.<br>* ಟೈಪಿಂಗ್ ಅರ್ಜಿಗಳು , ಮೇಲ್ಮನವಿಗಳು ಇತ್ಯಾದಿ.<br>* ಆದೇಶಗಳ ನಕಲು, ತೀರ್ಪಿನ ನಕಲು ಇತ್ಯಾದಿಗಳ ಕುರಿತು ವಿಷಯ ನಿರ್ವಾಹಕರ ಕಾರ್ಯನಿರ್ವಹಿಸುವುದು.<br>* ಪ್ರಧಾನ ಕಾನೂನು ನೆರವು ಅಭಿರಕ್ಷಕರು ವಹಿಸುವ ಇತರೆ ಯಾವುದೇ ಕಛೇರಿಯ ಕೆಲಸವನ್ನು ನಿರ್ವಹಿಸುವುದು.<br>* ರಾಜ್ಯ ಕಾನೂನು ಸೇವಾ ಪ್ರಾಧಿಕಾರ ವಹಿಸುವ ಇತರೆ ಯಾವುದೇ ಕೆಲಸವನ್ನು ನಿರ್ವಹಿಸುವುದು.<br>* ಸ್ವಾಗತಕಾರ ಕಂ ಡಾಟಾ ಎಂಟ್ರಿ ಅಪರೇಟರ್‌ಗೆ ಕೆಲಸಗಳ ಹಂಚಿಕೆ ಮಾಡುವುದು. |
| 02 | ಜವಾನ (ಮುನ್ಸಿ /ಅಟೆಂಡೆಂಟ್ ) | * ಜವಾನ ಹುದ್ದೆಯ ಸಾಮಾನ್ಯ ಕರ್ತವ್ಯ ನಿರ್ವಹಣೆ.<br>* ಕಛೇರಿ ಪ್ರಾರಂಭಕ್ಕೂ ಮೊದಲು ಕಛೇರಿಯನ್ನು ಶುಚಿಗೊಳಿಸಿಡುವುದು.<br>* ಕಛೇರಿಯ ಎಲ್ಲಾ ಸ್ಥಳವು ಶುಚಿಯಾಗಿರುವುದೇ ಎಂಬುದಾಗಿ ನೋಡುವುದು.<br>* ಸಂದರ್ಶಕರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು.<br>* ಟಪಾಲು ಕರ್ತವ್ಯ ಮತ್ತು ಇತರೆ ಕರ್ತವ್ಯ ನಿರ್ವಹಣೆ. |

**ಷರತ್ತುಗಳು:**

1.ನೇಮಕಾತಿಯು ಸಂಪೂರ್ಣವಾಗಿ ತಾತ್ಕಲಿಕವಾಗಿದ್ದು 06 ತಿಂಗಳ ಅವಧಿಗೆ ಮಾತ್ರ ಸೀಮಿತವಾಗಿರುತ್ತದೆ. ಕರ್ತವ್ಯ ಸಾಮಾರ್ಥ ತೃಪ್ತಿಕರವಾದಲ್ಲಿ ವಿಸ್ತರಣೆಗೆ ಅವಕಾಶವಿರುತ್ತದೆ.
2. ಶೈಕ್ಷಣಿಕ ಅರ್ಹತೆಯ, ಕಂಪ್ಯೂಟರ್ ಜ್ಞಾನದ ದಾಖಲೆ ಪ್ರತಿಗಳು,ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ಪ್ರತಿಗಳನ್ನು ಅರ್ಜಿಗೆ ಲಗತ್ತಿಸುವುದು. ನೇಮಕಾತಿ ಪ್ರಾಧಿಕಾರ ಕೋರಿದಾಗ ಮೂಲ ದಾಖಲೆಗಳನ್ನು ಹಾಜರುಪಡಿಸತಕ್ಕದ್ದು.

ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು
ಜಿಲ್ಲಾ ನೇಮಕಾತಿಯ ಸಮಿತಿಯ ಸದಸ್ಯರು
ತುಮಕೂರು

ಪ್ರಭಾರ ಅಧ್ಯಕ್ಷರು,
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮತ್ತು
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ
ಜಿಲ್ಲಾ ನೇಮಕಾತಿಯ ಸಮಿತಿ, ತುಮಕೂರು